ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ,
ನವಲಗುಂದ

ಸಿ.ಸಿ. ನಂ.**6/2025**

ಫಿರ್ಯಾದಿದಾರರು : ಕರ್ನಾಟಕ ಸರಕಾರ, ನವಲಗುಂದ ಪಿ.ಎಸ್.

ವಿರುದ್ಧ

ಆರೋಪಿತರು : **1.** ರಾಮಣ್ಣಾ ತಂದೆ ಹನಮಂತ ಕಂದಗನೂರ,
ವಯಾಃ ವರ್ಷ, ಉದ್ಯೋಗಃ ಚಾಲಕ,
ಸಾಃಕಾಶಿನಕುಂಟೆ, ತಾಃ ನಿಡಗುಂದಿ.
ಜಿಲ್ಲಾಃ ವಿಜಯಪೂರ.

<u>ಆಪಾದನೆ</u>

ನವಲಗುಂದ ಪೋಲೀಸ್ ಠಾಣೆಯ ಹದ್ದಿಯ ಪೈಕಿ ನವಲಗುಂದ ಶಹರದ ಹದ್ದಿಯ ಹುಬ್ಬಳ್ಳಿ-ಸೊಲ್ಲಾಪೂರ ರಸ್ತೆಯ ಮೇಲೆ ಬೆಳವಟಗಿ ಕ್ರಾಸ್ ಬೆನ್ನೆಹಳ್ಳದ ಬ್ರಿಡ್ಜ ಹತ್ತಿರ ದಿನಾಂಕಃ 15.11.2024 ರಂದು ಮಧ್ಯಾಹ್ನ 1.20 ಗಂಟೆಯ ಸುಮಾರಿಗೆ ಆರೋಪಿಯಾದ ನೀವು ನಿಮ್ಮ ಬಾಬತ್ ಕೆಎಸಆರಟಿಸಿ ಬಸ್ ನಂ.ಕೆಎ-29/ ಎಫ್-1140 ನೇದ್ದನ್ನು ನವಲಗುಂದ ಕಡೆಯಿಂದ ನರಗುಂದ ಕಡೆಗೆ ಅತೀ ವೇಗವಾಗಿ ಹಾಗೂ ನಿಷ್ಕಾಳಜಿತನದಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಹೋಗಿ, ನಿಮ್ಮ ಮುಂದೆ ಹೊರಟಿದ್ದ ಲಾರಿಯನ್ನು ಓವರ ಟೇಕ ಮಾಡಲು ಹೋಗಿ ನರಗುಂದ ಕಡೆಯಿಂದ ನವಲಗುಂದ ಕಡೆಗೆ ರಸ್ತೆಯ ಮೇಲೆ ಎಡಬದಿಯಲ್ಲಿ ಹೊರಟಿದ್ದ ಪಿರ್ಯಾದಿಯ ಮಾರುತಿ ಕಂಪನಿಯ ಡಿಜೈರ ಕಾರ್ ನಂ.ಕೆಎ-29/ಸಿ-2793 ನೇದ್ದಕ್ಕೆ ಡಿಕ್ಕಿ ಮಾಡಿ ಅಪಘಾತ ಪಡಿಸಿ ಪಿರ್ಯಾದಿ ಕಾರಿನ ಬಲಗಡೆ ಪೂರ್ತಿ ಜಖಂಗೊಳಿಸಿ ಪಿರ್ಯಾದಿಗೆ ಬಲಕಣ್ಣಿನ ಹುಬ್ಬಿಗೆ ಸ್ವಲ್ಪ ರಕ್ತಗಾಯ ಹಾಗೂ ಬಲಕೈಗೆ ಒಳಪೆಟ್ಟು ಪಡಿಸಿದ್ದು, ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.281 ಹಾಗೂ 125(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಅಧಿಕಾರದ ವ್ಯಾಪ್ತಿಯಲ್ಲಿ ಎಸಗಿರುವುದಾಗಿ ಆರೋಪಿಸುತ್ತೇನೆ.

ಪ್ರಶ್ನೆ.**1:** ಮೇಲೆ ಓದಿ ಹೇಳಿದ ಆಪಾದನೆ ತಿಳಿಯಿತೆ ?

**ಉತ್ತರಃ**

**ಪ್ರಶ್ನೆ.2:** ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ ?

**ಉತ್ತರಃ**

**(**ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ ಉತ್ತರ ಪಡೆದು ಬಹಿರಂಗ ನ್ಯಾಯಾಲಯದಲ್ಲಿ ನಮೂದು ಮಾಡಲಾಯಿತು **)**

ನವಲಗುಂದ.
ದಿನಾಂಕಃ**03.09.2025.**

**(**ನವೀನ ಎಫ್. ಡಿಸೋಜಾ**)**
ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನವಲಗುಂದ.